**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 30.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ.ಆರ್ ಬಿ ಹೆಚ್ ವಕೀಲರಿಂದಃ**

3. ಹನಮಂತಪ್ಪ ಮತ್ತು ಅವರ ಸಹೋದರಿಯರು ಸಲ್ಲಿಸಿದ ಆರ್.ಎಸ್.ಎ. ನಂ.5063/2013 ಇದು ವಜಾ ಆಯಿತು ಎಂದರೆ ಸರಿ. ಅಸಲು ದಾವಾ ನಂ.39/2007 ದಾವೆ ಚಾಲ್ತಿಯಲ್ಲಿದ್ದಾಗ ಯಾವುದೇ ಆಸ್ತಿಗಳು ಮಾರಾಟವಾಗಿರಲಿಲ್ಲ ಎಂದರೆ ಸಾಕ್ಷಿ ನನಗೆ ಆ ಕೇಸ್ ಬಗ್ಗೆ ಗೊತ್ತಿಲ್ಲ ಆದರೆ ಕೇಳಿ ಮಾತ್ರ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಹನಮಂತಪ್ಪ ಹಾಗೂ ಆತನ ಮಕ್ಕಳು ಸಲ್ಲಿಸಿದ FDP ಯನ್ನು ನಾನು ಪ್ರಸ್ತುತ ದಾವೆಯಲ್ಲಿ ಪ್ರಶ್ನೀಸಿರುತ್ತೇನೆ. ನಾನು ಪ್ರಸ್ತುತ ದಾವೆಯಲ್ಲಿ ಪ್ರಶ್ನೀಸಿರುವ judgment and decree ಬಗ್ಗೆ ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ರಾಮಚಂದ್ರಪ್ಪ ನಿಕ್ಕಂ ಇವರು ಮೂಲತಃ ಹನಮಂತಪ್ಪ ಇವರಿಂದ ಆಸ್ತಿ ಖರೀದಿಸಿರುತ್ತಾರೆ. ಸದರಿ ರಾಮಚಂದ್ರಪ್ಪ ನಿಕ್ಕಂ ಇವರು ಹನಮಂತಪ್ಪ ಇವರ ಕಡೆಯಿಂದ ಆಸ್ತಿ ಖರೀದಿಸುವಾಗ ಸದರಿ ಹನಮಂತಪ್ಪ ಇವರಿಗೆ ದಾವಾ ಆಸ್ತಿಯಲ್ಲಿ 1/5 ಹಿಸ್ಸೆ ಮಾತ್ರ ಇತ್ತು ಎಂದರೆ ಸರಿ. ಹನಮಂತಪ್ಪ ಇವರಿಗೆ ಮಲ್ಲವ್ವ ಎಂಬ ಸಹೋದರಿ ಇದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಈ ದಾವೆಯಲ್ಲಿ ಪ್ರಶ್ನಿಸಿದ ಪ್ರಕರಣಗಳಲ್ಲಿ ಸದರಿ ಮಲ್ಲವ್ವ ಪಕ್ಷಗಾರಳಾಗಿದ್ದಾಳೆ ಎಂದರೆ ಸಾಕ್ಷಿ ಅವಳ ಬಗ್ಗೆ ನಮಗೆ ಗೊತ್ತಿಲ್ಲ ಆದರೆ ಹನಮಂತಪ್ಪ ಹಾಗೂ ಅವರ ಮಕ್ಕಳ ವಿರುದ್ಧ ನಾವು ದಾವೆ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಮಲ್ಲವ್ವನ ಮಗಳ ಗಂಡ ರಾಮಚಂದ್ರ ನಿಕ್ಕಂ ಎಂದರೆ ಸಾಕ್ಷಿ ನನಗೆ

ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹನಮಂತಪ್ಪ ಹಾಗೂ ಅವರ ಹೆಂಡತಿ ಮಕ್ಕಳ ಮಧ್ಯ ಇರುವ ಮಾಹಿತಿ ರಾಮಚಂದ್ರಪ್ಪ ನಿಕ್ಕಂ ಇವರಿಗೆ ಇತ್ತು ಎಂದರೆ ಸಾಕ್ಷಿ ಸದರಿ ರಾಮಚಂದ್ರಪ್ಪ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ರಾಮಚಂದ್ರಪ್ಪ ನಿಕ್ಕಂ ಇವರು ಬ್ಲಾಕ್ 509 ಹಾಗೂ 652 ಗಳನ್ನು ನೀಲಣ್ಣನವರ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಾರಾಟ ಮಾಡಿದ ವಿಷಯ ಗೊತ್ತು ಆದರೆ ಯಾವ ಆಸ್ತಿಗಳೆಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎರಡು ಸರ್ವೆ ನಂಬರಗಳನ್ನು ನೀಲಣ್ಣವರ ಇವರು ಜಾಫರಸಾಬ ಗುಮ್ಮನಾಳ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರು ಬ್ಲಾಕ್ ನಂ.509 ನ್ನು ಮಾತ್ರ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಬ್ಲಾಕ್ ನಂ.652 ಇದನ್ನು ನೀಲಣ್ಣವರ ಇವರು ಪ್ರಸ್ತುತ ವಾದಿಗೆ ಮಾರಾಟ ಮಾಡಿದರು ಎಂದರೆ ಸಾಕ್ಷಿ ನನಗೆ ಸರ್ವೆ ನಂಬರ 509 ರ ಬಗ್ಗೆ ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ನಾವು ಬ್ಲಾಕ್ ನಂ.509 ಆಸ್ತಿಯನ್ನು ಜಾಫರಸಾಬ ಗುಮ್ಮನಾಳ ಖರೀದಿಸುವಾಗ FDP No.28/2012 ಇದು ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿ ನಾವು encumbrance ಹಾಗೂ ಇತರೆ ದಾಖಲೆಗಳನ್ನು ಪರಿಶೀಲನೆ ಮಾಡಿಯೇ ಅಸ್ತಿ ಖರೀದಿಸಿರುತ್ತೇವೆ ಆ ಸಮಯದಲ್ಲಿ ಯಾವುದೇ ಋಣಭಾರ ಇರಲಿಲ್ಲ ಎಂದು ನುಡಿಯುತ್ತಾರೆ. ನಾವು ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನೀಲಣ್ಣವರ ಇವರಿಗೆ ಭೇಟಿಯಾಗಿಲ್ಲ. FDP.No.28/2012 ರ ದಾಖಲೆಗಳನ್ನು ನಾನು ನೋಡಿಯೇ ಈ ದಾವೆಯಲ್ಲಿ ಹಾಜರಪಡಿಸಿರುತ್ತೇನೆ. FDP No.28/2012 ಪ್ರಕರಣದಲ್ಲಿ ಪ್ರಸ್ತುತ ಪ್ರಕರಣದ ವಾದಿಗಳು, ನಿಕ್ಕಂ ಹಾಗೂ ನೀಲಣ್ಣವರ ಪಕ್ಷಗಾರರಾಗಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾದಿ ನಂ.1 ಸಹ FDP No.28/2012 ಪ್ರಕರಣದಲ್ಲಿ ಹಾಜರಾಗಿ ವಕೀಲರನ್ನು ನೇಮಕ

ಮಾಡಿಕೊಂಡು ತಕರಾರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ನಂ.1 ಸದರಿ FDP No.28/2012 ನಲ್ಲಿ ಹಾಜರಾಗಿ ತಕರಾರು ಸಲ್ಲಿಸಿದ ನಂತರ ಬ್ಲಾಕ್ ನಂ.652 ರಲ್ಲಿ 2 ಎಕರೆ ಜಮೀನನ್ನು ಈ ಪ್ರಕರಣದ ಪ್ರತಿವಾದಿ ನಂ.8 ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವು ದಾವಾ ಆಸ್ತಿಯನ್ನು ಖರೀದಿಸುವಾಗ ಅದರಲ್ಲಿ ಹನಮಂತಪ್ಪ ಇವರಿಗೆ ಆಸ್ತಿಯಲ್ಲಿ ಎಷ್ಟು ಹಕ್ಕು ಇತ್ತು ಹಾಗೂ ನಿಕ್ಕಂ ಮತ್ತು ನೀಲಣ್ಣವರ ಇವರು ಸಹ ಅವರ ಕಡೆಯಿಂದ ಆಸ್ತಿ ಖರೀದಿಸಿದ ಬಗ್ಗೆ ನಮಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಪ್ರರಕಣ ಚಾಲ್ತಿಯಲ್ಲಿದ್ದಾಗಲೂ ಸಹ ಮೋಸ ಮಾಡಿ ಆಸ್ತಿಯನ್ನು ನಿಮಗೆ ಮಾರಾಟ ಮಾಡಿರುತ್ತಾರೆಂದು ನೀವು ಪ್ರತಿವಾದಿ ನಂ.7 ರವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರು ಅವರಿಗೆ ನೋಟೀಸ್ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅವರ ವಿರುದ್ಧ ನಾವು ಕ್ರಿಮಿನಲ್ ಪ್ರಕರಣ ದಾಖಲಿಸಿಲ್ಲ. ಸದರಿ ನೋಟೀಸಿನ ಪ್ರತಿಯನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರಪಡಿಸಿರುತ್ತದೆಯೋ ಇಲ್ಲವೋ ಎಂದು ನನಗೆ ಮಾಹಿತಿ ಇಲ್ಲ. ಅಂತಹ ಯಾವುದೇ ನೋಟೀಸನ್ನು ನಾನು ಕಳುಹಿಸಿಲ್ಲ ಆದರೂ ಸಹ ಕಳುಹಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಸದರಿ ನೋಟೀಸಿನ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.

4. ನಾನು ಈ ದಾವೆಯಲ್ಲಿ ಪ್ರಶ್ನೀಸಿದ ಪ್ರಕರಣಗಳನ್ನು ಯಾವ ಕಾರಣಕ್ಕಾಗಿ ಸಲ್ಲಿಸಿದ್ದರು ಎಂದು ನಾನು ಸಂಪೂರ್ಣವಾಗಿ ತಿಳಿದುಕೊಂಡಿರುತ್ತೇನೆ. ಹನಮಂತಪ್ಪ ಹಾಗೂ ಅವರ ಹೆಂಡತಿ ಮಕ್ಕಳ ಮಧ್ಯ ಜಗಳವಿದ್ದ ಬಗ್ಗೆ ಈ ಪ್ರಕರಣ ಸಲ್ಲಿಸುವಾಗ ನಮಗೆ ಗೊತ್ತಾಯಿತು ಮೊದಲು ಗೊತ್ತಿರಲಿಲ್ಲ. ಅಸಲು ದಾವಾ ನಂ.39/2007 ರಲ್ಲಿ ಸದರಿ

ದಾವೆಯಲ್ಲಿನ ವಾದಿ ಹಾಗೂ ಪ್ರತಿವಾದಿ ನಂ.1 ಮತ್ತು 4 ರವರ ಮಧ್ಯ ತಂಟೆ ಇತ್ತು ಎಂದರೆ ಸರಿ. ಸದರಿ ದಾವೆ ಸಲ್ಲಿಸಿದಾಗಿನಿಂದಲೂ ಹನಮಂತಪ್ಪ ಹಾಗೂ ಆತನ ಸಹೋದರ ಸಹೋದರಿಯರು ಹನಮಂತಪ್ಪನ ಹೆಂಡತಿ ಮಕ್ಕಳಿಗೆ ಹಿಸ್ಸೆ ಕೊಡಬಾರದು ಎಂದು ಉದ್ದೇಶ ಹೊಂದಿದ್ದರು ಎಂದರೆ ಸಾಕ್ಷಿ ಸದರಿ ಸಮಯದಲ್ಲಿನ ಅವರ ಉದ್ದೇಶದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಈ ದಾವೆಯಲ್ಲಿನ ಪ್ರತಿವಾದಿ ನಂ.1 ರಿಂದ 4 ಇವರು ಪತ್ರಿಕಾ ಪ್ರಕಟಣೆ ನೀಡಿ ಪ್ರಕರಣಗಳು ಚಾಲ್ತಿಯಲ್ಲಿವೆ ಹಾಗೂ ದಾವಾ ಆಸ್ತಿಯನ್ನು ಯಾರೂ ಖರೀದಿಸಬಾರದು ಎಂದು ತಿಳಿಸಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. FDP ಪ್ರಕರಣ ಚಾಲ್ತಿಯಲ್ಲಿದ್ದಾಗ ಹನಮತಂಪ್ಪ ತೀರಿಕೊಂಡ ಕಾರಣ ಆತನ ವಾರಸುದಾರರಿಗೆ ಸದರಿ ಹನಮಂತಪ್ಪನ ಹಿಸ್ಸೆ ಸೇರಿ ಪ್ರತಿಯೊಬ್ಬರಿಗೆ ಒಟ್ಟು 1/4 ಹಿಸ್ಸೆ ಇದೆ ಎಂದು ಆದೇಶವಾಯಿತು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನೇ ನಾವು ಈ ದಾವೆಯಲ್ಲಿ ಪ್ರಶ್ನೀಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ FDP ಯಲ್ಲಿ ಆದ ಆದೇಶದ ಮೇಲೆ ನೀವೇನಾದರೂ ಮಾನ್ಯ ಜಿಲ್ಲಾ ಅಥವಾ ಉಚ್ಚ ನ್ಯಾಯಾಲಯದಲ್ಲಿ ಅಪೀಲ್ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಆ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. FDP ಯಲ್ಲಿ ಫೆಬ್ರುವರಿ 2019 ರಲ್ಲಿಯೇ ಅಂತಿಮ ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ನಮಗೆ 2021 ರಲ್ಲಿ ನ್ಯಾಯಾಲಯದ ಬೇಲಿಫ್ ಬಂದಾಗ ಸದರಿ ವಿಷಯ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಅದಾದ ನಂತರ ಪ್ರತಿವಾದಿ ನಂ.1 ರಿಂದ 4 ಕಬ್ಜಾ ಪಡೆಯುವುದಕ್ಕೋೀಸ್ಕರ ಇಪಿ ನಂ.110/2019 ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನಮ್ಮ ಹತ್ತಿರ ಕಬ್ಜಾ ಪಡೆಯಲು ಬಂದಾಗ ಮಾತ್ರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

ನ್ಯಾಯಾಲಯದ ಬೇಲಿಫ್ ಬಂದು ಪ್ರಸ್ತುತ ಪ್ರಕರಣದ ಪ್ರತಿವಾದಿ ನಂ.1 ರಿಂದ 4 ರವರಿಗೆ ದಾವಾ ಆಸ್ತಿಯ ಕಬ್ಜಾ ಕೊಡಿಸಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಖಾಂತರ ಕಬ್ಜೆ ಪಡೆದುಕೊಂಡ ನಂತರ ಪ್ರತಿವಾದಿ ನಂ.1 ರಿಂದ 4 ರವರೇ ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಾರೆ ಹಾಗೂ ಅದರ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ. ನ್ಯಾಯಾಲಯದ ಆದೇಶ ಆದ ಬಗ್ಗೆ ಅವರು ದಾವಾ ಆಸ್ತಿಯಲ್ಲಿ ಬೋರ್ಡ ಸಹ ಹಾಕಿಸಿರುತ್ತಾರೆ ಎಂದರೆ ಸರಿ. ಸದರಿ ಬೋರ್ಡನ್ನು ನಾನು, ವಾದಿ ನಂ.1 ಮತ್ತು ಪ್ರತಿವಾದಿ ನಂ.8 ಸೇರಿ ನಾಶಪಡಿಸಿರುತ್ತೇವೆ ಎಂದರೆ ಸರಿಯಲ್ಲ.

6. ಅಸಲು ದಾವಾ ನಂ.39/2007 ರಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಒಟ್ಟು 7 ಆಸ್ತಿಗಳು ಇದ್ದವು ಎಂದರೆ ನನಗೆ ಮಾಹಿತಿ ಇಲ್ಲ. FDP.28/2012 ರಲ್ಲಿ ಒಟ್ಟು 12 ಜನ ಎದುರುದಾರರು ಇದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಅಸಲು ದಾವಾ ನಂ.39/2007 ರಲ್ಲಿನ ಎಲ್ಲಾ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಹಾಗೂ FDP.28/2012 ರಲ್ಲಿ ಒಟ್ಟು 12 ಜನ ಎದುರುದಾರರನ್ನು ನೀವು ಈ ಪ್ರರಕಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನಮಗೆ ಎಲ್ಲದರ ಸಂಬಂಧ ಇಲ್ಲ ಹಾಗೂ ನಾವು ಖರೀದಿಸಿದ ಆಸ್ತಿಗಳು ಹನಮಂತಪ್ಪನ ಮಕ್ಕಳ ಮೇಲೆ ದಾವೆ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

(**ಮುಂದುವರೆದ ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ.ಆರ್ ಬಿ ಹೆಚ್ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**